## 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

<u>ಸಿ.ಸಿ. ಸಂಖ್ಯೆ 399/2020</u>

ಫಿರ್ಯಾದಿ ನಂಜನಗೂಡು ಪಟ್ಟಣ ಆರಕ್ಷಕ ಠಾಣೆ

ವಿರುದ್ಧ

ಆರೋಪಿಗಳು

1 ಲತಾ ಬಿನ್ ರಂಗೇಗೌಡ, 38 ವರ್ಷ,
ಕಿರಗೂರು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು,
ಮಂಡ್ಯ.

2 ವೀಣಾ ಬಿನ್ ಲೇ.ಮಹದೇವು, 48 ವರ್ಷ,
ಕಿರಗೂರು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು,
ಮಂಡ್ಯ.

3 ರಾಜೇಶ್ ಬಿನ್ ಲೇ.ನಂಜುಂಡಸ್ವಾಮಿ, 45 ವರ್ಷ,
ಕಿರಗೂರು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು,
ಮಂಡ್ಯ.

4 ಪ್ರಕಾಶ್ ಬಿನ್ ಲೇ.ನಂಜುಂಡಸ್ವಾಮಿ, 41 ವರ್ಷ,
ಕಿರಗೂರು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು,
ಮಂಡ್ಯ.

5 ಕುಮಾರ ಬಿನ್ ರಂಗೇಗೌಡ, 35 ವರ್ಷ,
ಕಿರಗೂರು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು,
ಮಂಡ್ಯ.

ಃ ದೋಷಾರೋಪಣೆ ಃ

ಶ್ರೀಮತಿ ವಿನುತ ಡಿ. ಎಸ್., ಬಿ.ಎ ಸ್ಸಿ(ಸೆರಿ). ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನಂಜನಗೂಡು ಆದ ನಾನು ನಿಮ್ಮ ವಿರುದ್ಧ ರೂಪಿಸಿರುವ ದೋಷಾರೋಪಣೆ ಏನೆಂದರೆ,

ದಿನಾಂಕ 25.05.2019 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನಂಜನಗೂಡು ಪಟ್ಟಣ ಪೊಲೀಸ್ ಠಾಣಾ ಸರಹದ್ದು ನಂಜನಗೂಡು ಪಟ್ಟಣದ ಚಾಮಲಾಪುರದ ಬಡಾವಣೆಯ ರಾಮಮಂದಿರ ರಸ್ತೆಯ ಬಳಿಯಿರುವ ಚಾಸಾ-1 ರವರು ವಾಸವಾಗಿದ್ದ ಮನೆಗೆ ಆರೋಪಿತರಾದ ನೀವು ಹಲ್ಲೆ ಮಾಡುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡಿದ್ದ ಚಾಸಾ-1 ರವರ ಮನೆಗೆ ಹೋಗಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 143 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ದಂಡನೀಯ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

R. Latha

ಎರಡನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ *ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ರವರ ಮನೆಗೆ ಹೋಗಿ ಈ ಮನೆಯು*

KUMAR

ನಮ್ಮ ಭಾಗಕ್ಕೆ ಬಂದಿರುತ್ತೆ, ಮನೆಯನ್ನು ಕೆಡವಿ ಹಾಕಬೇಕು ಮನೆಯನ್ನು ಖಾಲಿ ಮಾಡು ಎಂದು ಹೇಳಿ ಗಲಾಟೆ ಮಾಡಿ 01 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ಹಿಡಿದು ತಡೆದುಕೊಂಡು ಅಕ್ರಮ ತಡೆಯನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 341 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ದಂಡನೀಯ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಮೂರನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ರವರನ್ನು 01 ನೇ ಆರೋಪಿಯಾದ ನೀವು ಹಿಡಿದು ತಡೆದುಕೊಂಡಾಗ 02 ನೇ ಆರೋಪಿಯಾದ ನೀವು ನಿಮ್ಮ ಕೈಗಳಿಂದ ಮುಂದಲೆ ಹಿಡಿದು ಎಳೆದಾಡಿದ 03 ನೇ ಆರೋಪಿತರಾದ ನೀವು ಚಾಸಾ-1 ರವರ ಬಲಕೈಯನ್ನು ಹಿಡಿದು ನುಲುಚಿ ಸ್ವಯಂಪ್ರೇರಿತವಾಗಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ರವರಿಗೆ 03 ನೇ ಆರೋಪಿಯಾದ ನೀವು ಬೋಳಿ ಮಗಳೇ ಎಂದು, 04 ನೇ ಆರೋಪಿಯಾದ ನೀವು ಲೋಫರ್ ಮುಂಡೆ ಎಂದು, 2 ನೇ ಆರೋಪಿಯಾದ ನೀವು ಸೂಳೆಮುಂಡೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿಯನು ಭಂಗಮಾಡಲು ಉದ್ರೇಕಿಸುವುದಕ್ಕಾಗಿ ಉದ್ದೇಶಪೂರ್ವಾಗಿ ಅವಮಾನಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಕೊನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ 03 ಮತ್ತು 04 ನೇ ಆರೋಪಿತರಾದ ನೀವು ಚಾಸಾ-1 ರವರ ಎರಡು ರಟ್ಟೆಗಳನ್ನು ಹಿಡಿದಾಗ 05 ನೇ ಆರೋಪಿಯಾದ ನೀವು ಬಟ್ಟೆಯನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿ ಹೆಂಗಸಿನ ಮಾನಭಂಗ ಮಾಡುವ ಉದ್ದೇಶದಿಂದ ಚಾಸಾ-01 ರವರ ಮೇಲೆ ಅಪರಾಧಿತ ಬಲಪ್ರಯೋಗ ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 354 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಯು ಆರೋಪಿತರಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

13/10/21

2 ನೇ ಎ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು

1 R. Latha
2 ವೀಣಾ ಕುಮಾರಿ
3 [illegible]
4 N. Powahy
5 KUMAR